ಎ-330-102

## ಕರ್ನಾಟಕ ವಿಧಾನ ಪರಿಷತ್ತು

**ಶ್ರೀ ಎಸ್.ಆರ್.ಪಾಟೀಲ್, ಶ್ರೀ ಕೆ.ಟಿ ಶ್ರೀಕಂಠೇಗೌಡ, ಶ್ರೀ ಐವನ್ ಡಿ'ಸೋಜಾ, ಶ್ರೀ ಆರ್.ಬಿ ತಿಮ್ಮಾಪೂರ, ಶ್ರೀ ಪಿ.ಆರ್ ರಮೇಶ್ ಹಾಗೂ ಇತರರು ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳು ನಿಯಮ 330ರ ಅಡಿಯಲ್ಲಿ ನೀಡಿರುವ ಸೂಚನೆಗೆ ಹೇಳಿಕೆ:**

### ಸೂಚನೆ

ರಾಜ್ಯದಲ್ಲಿ ದಿನನಿತ್ಯ ಉಪಯೋಗಿಸುವ ಆಹಾರ ಪದಾರ್ಥಗಳಲ್ಲಿ ಅಪಾರ ಪ್ರಮಾಣದ ನಿಷೇಧಿತ (MSG POWDER) ಮತ್ತು ಅಜಿನೋ ಮೋಟೋ" ಗಳನ್ನು ಬಳಸುತ್ತಿದ್ದು, ನೈಸರ್ಗಿಕವಾಗಿ ದೊರೆಯುವ ಹಣ್ಣುಗಳನ್ನು ರಾಸಾಯನಿಕ ಬಳಸಿ ಕೃತಕವಾಗಿ ಹಣ್ಣು ಮಾಡುವುದು, ಸೇಬಿಗೆ ಮೇಣದ ಲೇಪನ ಮಾಡುವುದು, ಮೀನು ಸಂರಕ್ಷಿಸಿಡಲು ಫಾರ್ಮಲಿನ್ ರೀತಿಯ ರಾಸಾಯನಿಕ ಬಳಸುತ್ತಿರುವುದು, ರಾಸಾಯನಿಕ ಮಿಶ್ರಿತ ಅಡುಗೆ ಎಣ್ಣೆ ಪೂರೈಕೆ ಸೇರಿದಂತೆ ನಾವುಗಳು ದಿನನಿತ್ಯ ಬಳಸುವ ಬಹುತೇಕ ಆಹಾರ ಪದಾರ್ಥಗಳಲ್ಲಿ ಕಲಬೆರಕೆ ಹೆಚ್ಚಾಗಿ ಜನ ಸಾಮಾನ್ಯರು ಸೇವಿಸುವ ಆಹಾರವು ವಿಷಕಾರಿಯಾಗಿ ಮನುಷ್ಯರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಇದರಿಂದ ಮನುಷ್ಯರು ಮಾರಣಾಂತಿಕ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ.

ಇಂತಹ ಕಲಬೆರಕೆ ಆಹಾರ ಪದಾರ್ಥಗಳ ಪೂರೈಕೆದಾರರ ವಿರುದ್ಧ ಸರ್ಕಾರವು ಕಠಿಣ ಕ್ರಮ ಕೈಗೊಳ್ಳುವಂತೆ ಮತ್ತು ಈ ಉದ್ದೇಶಕ್ಕಾಗಿ ಸ್ಥಾಪನೆಗೊಂಡಿರುವ ಆರೋಗ್ಯ ಸುರಕ್ಷತಾ ಆಯುಕ್ತಾಲಯಕ್ಕೆ ಅವಶ್ಯವಿರುವ ಸಿಬ್ಬಂದಿಯನ್ನು ಖಾಯಂ ಆಗಿ ನೇಮಕ ಮಾಡುವ ಮೂಲಕ ಮತ್ತಷ್ಟು ಬಲಪಡಿಸಿ ಪರಿಣಾಮಕಾರಿಯಾಗಿ ಆಹಾರಗಳ ಕಲಬೆರಕೆಯನ್ನು ಸಂಪೂರ್ಣವಾಗಿ ತಡೆಯುವ ಬಗ್ಗೆ ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇವೆ.

---

### ಹೇಳಿಕೆ

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಗೆ ವೃಂದ ಮತ್ತು ನೇಮಕಾತಿ ನಿಯಮಗಳು ದಿನಾಂಕ:05/01/2017 ರಂದು ಜಾರಿಗೆ ಬಂದಿದ್ದು, ನೇರ ನೇಮಕಾತಿಗೆ ಗುರುತಿಸಿರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲು ಪರಿಶೀಲಿಸಲಾಗುತ್ತಿದ್ದು, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆ.ಇ.ಎ) ಮುಖಾಂತರ ಹುದ್ದೆಗಳ ಭರ್ತಿಗೆ ಪತ್ರ ವ್ಯವಹರಿಸಲಾಗಿರುತ್ತದೆ.

ಖಾಯಂ ಹುದ್ದೆಗಳನ್ನು ಭರ್ತಿ ಮಾಡುವವರೆಗೆ ತಾತ್ಕಾಲಿಕವಾಗಿ ಪ್ರಸ್ತುತ ಖಾಲಿ ಇರುವ ಆಹಾರ ಸುರಕ್ಷತಾಧಿಕಾರಿಗಳ ಹುದ್ದೆಗೆ ಹಾಲಿ ಲಭ್ಯವಿರುವ ಆನ್‌ಲೈನ್ ಮೂಲಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಯವರಿಂದ expression of interest ಮೂಲಕ ಈ ಕೆಳಕಂಡ ವಿದ್ಯಾರ್ಹತೆ ಇರುವವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

Bachelor Degree in Food Technology or Dairy Technology or Biotechnology or Oil Technology or Agricultural Science or Veterinary Science or Bio-Chemistry or Microbiology or Master's Degree in Chemistry or Degree in Medicine from a recognized University or any other equivalent /recognized qualification notified by the Central Government and has successfully completed training as specified by the Food Authority in a recognized institute or institution approved for the purpose.

ಅಂಕಿತಾಧಿಕಾರಿಗಳ ಹುದ್ದೆಗೆ ತಾತ್ಕಾಲಿಕವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಎರವಲು ಮತ್ತು ಹೆಚ್ಚುವರಿ ಕಾರ್ಯಭಾರದ ಮೂಲಕ ವೈದ್ಯರ ಸೇವೆಯನ್ನು ಪಡೆಯಲಾಗುತ್ತಿದೆ.

**ಆಕುಕ 58 ಎಸ್‌ಬಿವಿ 2020**

(ಬಿ. ಶ್ರೀರಾಮುಲು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು